ನಾನು ಕಂಡ ಅಜ್ಜ – ನಾನು ತಿಳಿದುಕೊಂಡಂತೆ

ಅಜ್ಜನ ನೆನಪಿನ ಸಂಚಿಕೆಗೆ ಬರಹಗಳನ್ನು ಆಹ್ವಾನಿಸುವ ಪತ್ರದ ಒಕ್ಕಣೆ ಸ್ಪಷ್ಟವಿದೆ. " ತಾವು ಅಜ್ಜನನ್ನು ಒಪ್ಪಿರಬಹುದು, ಒಪ್ಪದೇ ಇರಬಹುದು. ಸಂದೇಹವಾದಿಗಳಿರಬಹುದು. ಚಕಿತಗೊಂಡಿರಬಹುದು" ವರ್ಗೀಕರಣ ನನಗೆ ಒಪ್ಪಿಗೆಯಾಯಿತು. ಇವುಗಳಲ್ಲಿ ನಾನು ಯಾವ ವರ್ಗದವ? ಒಪ್ಪದಿದ್ದವನಾಗಿದ್ದರೆ ೮–೧೦ ವರ್ಷ ಕಾಲ ಅವರ ದರ್ಶನಕ್ಕಾಗಿ ಅಗಾಗ ಹೋಗುವ ಸಂಭವವೇ ಇರುತ್ತಿರಲಿಲ್ಲ.ಚಕಿತಗೊಂಡಿದ್ದಂತೂ ಪೂರ್ಣ ಸತ್ಯ. ಸಂದೇಹಾದಿಗಳು ಮನಸ್ಸಿನಲ್ಲಿ ಹಾದುಹೊದ ಸಂದರ್ಭಗಳೇ ಇಲ್ಲವೆಂದರೆ ಅಸತ್ಯದ ಮಾತಾದೀತು.

ಅಜ್ಜನವರ ದರ್ಶನಕ್ಕಾಗಿ ನಾನು ಪುತ್ತೂರಿಗೆ ಹೋಗುತ್ತಿದ್ದ ವಿಚಾರ ತಿಳಿದ ನನ್ನ ಕೆಲವು ಪರಿಚಿತರು ನನ್ನನ್ನು ಕೇಳಿದ್ದಿದೆ. "ನೀನು ಅವರಲ್ಲಿ ಏನು ವಿಶೇಷ ಕಂಡಿದ್ದೀಯಾ?" ಉತ್ತರ ಇಷ್ಟೇ. ಮಹಾತ್ಮರ ಕುರಿತು ಓದಿದಾಗಲೆಲ್ಲಾ ಅಂತಹವರನ್ನು ಕಾಣುವ ಸಂದರ್ಭ ನನ್ನ ಪಾಲಿಗೆ ಬರಲೇ ಇಲ್ಲವಲ್ಲಾ ಎಂದು ಕಳವಳ ಪಡುತ್ತಿದ್ದಾಗಲೇ ನನಗೆ ಅಜ್ಜ ಸಿಕ್ಕಿದ್ದು. ಅವರೊಬ್ಬ ನಾನು ಹುಡುಕುತ್ತಿದ್ದಂತಹಾ ವ್ಯಕ್ತಿಯೇ ಎಂದು ಅವರೊಡನೆ ಮಾತನಾಡಿದ ಪ್ರಥಮ ಸಂದರ್ಭದಲ್ಲೇ ನನ್ನ ಅಂತರಾತ್ಮಕ್ಕೆ ಮನವರಿಕೆಯಾಯಿತು. ಪುರಾವೆಗಳನ್ನು ಹುಡುಕಲು ನನ್ನ ಮನಸ್ಸು ಉದ್ಯುಕ್ತವಾಗಲೇ ಇಲ್ಲ. ಅದು ನನ್ನ ಅದೃಷ್ಟ!

ಅಜ್ಜನವರನ್ನು ನಂಬಿಕೆಯಿಂದ ನೋಡಿದ ಯಾರೂ ಚಕಿತಗೊಳ್ಳಲೇ ಬೇಕು. ಮಹಾತ್ಮರ ಬಗ್ಗೆ ರೂಢಿಯಿಂದ ಒಂದು ಕಲ್ಪನೆ ನಮ್ಮ ಮನಸ್ಸಿನಲ್ಲಿರುತ್ತದೆ. ಅದಕ್ಕೂ ನಾವು ಕಾಣುತ್ತಿರುವವರಿಗೂ ತುಂಬಾ ಅಂತರ! ಅಂಥವರಾಗಿದ್ದೂ ಇಷ್ಟು ಸರಳತನ! ನಮ್ಮಂಥವರನ್ನೂ ಮೈಮುಟ್ಟಿ (ಯಾಕೆ? ಕೆಲವೊಮ್ಮೆ ಕೈಕುಲುಕಿ!) ಮಾತನಾಡುವಷ್ಟು ಅನೌಪಚಾರಿಕತೆ! ಹೋದಾಗಲೆಲ್ಲಾ ಪ್ರೀತಿಯ ಉಪಚಾರ! ನಮ್ಮದೋ ಲೆಕ್ಕಾಚಾರದ , ಮೌಲ್ಯಮಾಪನ ಮಾಡುವ ಮನೋವೃತ್ತಿ. ಇವರು ಯಾವ ಮಟ್ಟದ ಜ್ಞಾನಿ? ಭಗವಾನ್ ರಮಣರದೋ ಅಲ್ಲ.... ಹೀಗೆ! ವ್ಯವಹಾರದ ಮಾತುಗಳಲ್ಲಿದ್ದಾಗ ಸಂದೇಹ ಇಣುಕಿ ನೋಡಿದ ಕ್ಷಣಗಳು.

ಕೇವಲ ಒಂದೆರಡು ಬಾರಿ ಅಜ್ಜನಲ್ಲಿಗೆ ಹೋದವರಿಗೆ ಒಂದು ಅನಿಸಿಕೆಯಿದೆ– ಅವರು ಹೇಳಿದ್ದನ್ನೇ ಹೇಳುತ್ತಾರೆ, ಹೊಸತೇನೂ ಇಲ್ಲ ಎಂದು. ಇದಕ್ಕೆ ಅಜ್ಜನ ಉತ್ತರವೂ ಇತ್ತು. ಒಮ್ಮೆ ಅಜ್ಜನಿಗೆ ಹೃದಯದ ವ್ಯಾಧಿಯಾದಾಗ ಅವರೊಂದಿಗೆ ಭೇಟಿಗೆ ನಿರ್ಬಂಧವಿತ್ತು. ಆದರೂ, ಅಜ್ಜನ ದರ್ಶನ ಭಾಗ್ಯ ಇನ್ನೆಲ್ಲಿ ಇಲ್ಲವಾಗುತ್ತದೋ ಎಂದು ಆತಂಕದಿಂದ ನಾವು ಸ್ನೇಹಿತರಿಬ್ಬರು ಪುತ್ತೂರಿಗೆ ಹೋಗಿದ್ದೆವು. ಅಜ್ಜ ಒಬ್ಬರೇ ಒಂದು ಸಣ್ಣ ಆರಾಮ ಕುರ್ಚಿಯಲ್ಲಿ ತಲೆ ತಗ್ಗಿಸಿ ಕಣ್ಣುಮುಚ್ಚಿ ಕುಳಿತಿದ್ದರು. ಸುತ್ತ ಮುತ್ತ ಯಾರೂ ಇರಲಿಲ್ಲ. ನಾವು ಏನೂ ಸದ್ದು ಮಾಡದೆ ಅವರಿದ್ದಲ್ಲಿಗೆ ಹೋಗಿ ಅಡ್ಡಬಿದ್ದು ನಮಸ್ಕರಿಸುವಷ್ಟರಲ್ಲೇ ಅಜ್ಜ ಹೇಳಿದ್ದು ಕೇ:ಳಿಸಿತು. "ಗುರುವನ್ನು ಹೊರಗೆ ಹುಡುಕುವುದೇ ಬೇಡ. ಅವನು ನಿಮ್ಮ ಒಳಗೇ ಇದ್ದಾನೆ. ಅವನನ್ನು ಅಲ್ಲೇ ಕಂಡರಾಯಿತು" ಇಷ್ಟು ಹೇಳಿದ ಮೇಲೆಯೇ ಅಜ್ಜ ಮುಖವೆತ್ತಿ ನಮ್ಮತ್ತ ನೋಡಿದ್ದು! ಅದಕ್ಕಿಂತ ಹೆಚ್ಚು ಆದಿನ ಅವರು ಮಾತಾಡಿದ್ದಿಲ್ಲ. ಆ ಮಾತನ್ನು ಅವರು ಹಿಂದೆಯೂ ಹೇಳಿದ್ದರು. ಆದರೆ ನನ್ನ ಮನಸ್ಸಿನಲ್ಲಿ ಅದು ಹೆಚ್ಚು ನಾಟಿದ್ದು ಆದಿನವೇ!

"ಅವರು ಸಾಧಕರಿಗೆ ನೆರವಾಗುವುದಿಲ್ಲ. ಮರು ಪ್ರಶ್ನೆಗಳನ್ನು ಹಾಕಿ ಬೆಚ್ಚಿ ಬೀಳಿಸುತ್ತಾರೆ. ಗೊಂದಲಕ್ಕೀಡುಮಾಡುತ್ತಾರೆ" ಎಂದೆಲಾ ಅಜ್ಜನ ಬಗ್ಗೆ ಕೆಲವರು ಆಕ್ಷೇಪಮಾಡಿದ್ದಿದೆ. ಮೇಲ್ನೋಟಕ್ಕೆ ಇದು ಸತ್ಯವೂ ಹೌದು. ಕೆಮ್ಮಾಯಿ ಆಶ್ರಮಕ್ಕೆ ಬರುತ್ತಿದ್ದುದು ಅಧ್ಯಾತ್ಮದಲ್ಲಿ ಒಲವಿದ್ದವರು ತಾನೇ. ಅಂಥವರು ಬರುವಾಗ ಅಜ್ಜ ಅವರನ್ನು ಸಹಜವಾಗಿಯೇ ಕೇಳುತ್ತಿದ್ದರು, "ಈಗ ಧ್ಯಾನಮಾಡುವುದನ್ನು ಕಲಿಸಲು ದೊಡ್ಡ ದೊಡ್ಡ ಶಿಬಿರಗಳೆಲ್ಲಾ ಆಗುತ್ತಾ ಇವೆಯಂತೇ, ನೀವೂ ಅವುಗಳಲ್ಲಿ ಭಾಗವಹಿಸಿ ತುಂಬಾ ಸಾಧನೆ ಮಾಡುತ್ತಾ ಇದ್ದೀರಲ್ಲಾ. ಎಷ್ಟು ವರ್ಷದಿಂದ ಧ್ಯಾನ ಮಾಡುತ್ತಾ ಇದ್ದೀರಿ?" ಉತ್ತರ ಸಕಾರಾತ್ಮಕವಾಗಿದ್ದರೆ ಅಜ್ಜನ ಮರು ಪ್ರಶ್ನೆ. "ಹಾಗಾದರೆ ನಿಮಗೆ ತುಂಬಾ ಅನುಭವಗಳಾಗಿರಬೇಕು. ಅದನ್ನು ನಮ್ಮೊಂದಿಗೆ ಹಂಚಿಕೊಳ್ಳಬಹುದಲ್ಲಾ?

ನಾವೂ ಅಂಥವರನ್ನು ಹುಡುಕುತ್ತಿದ್ದೇವೆ. ನಿಮಗೆ ದೇಹಭಾವನೆ ಹೋಗಿರಬೇಕು ಅಲ್ವಾ? " ಹೀಗೆ ಮುಂದುವರೆಯುತ್ತಿತ್ತು ಸಂವಾದ. ಎಲ್ಲವೂ ಪ್ರಶ್ನೆ ಕೇಳಿದವರ , ಸಂವಾದದಲ್ಲಿ ಸಕ್ರಿಯವಾಗಿ ಅಥವಾ ಮೌನವಾಗಿ ಪಾಲ್ಗೊಳ್ಳುತ್ತಿದ್ದವರ ಭ್ರಮೆಗಳ ಪೊರೆಗಳನ್ನು ಒಂದೊಂದಾಗಿ ಕಳಚುವತ್ತ! ಧ್ಯಾನ ಶಿಬಿರಗಳಿಗೆಲ್ಲಾ ಅವರು ಅಷ್ಟಾಗಿ ಮಹತ್ವ ಕೊಟ್ಟಂತೆ ಅನಿಸುತ್ತಿರಲೇ ಇಲ್ಲ.

ಹೀಗಿದ್ದೂ ಅಜ್ಜನೇ ಒಂದು ಧ್ಯಾನ ಶಿಬಿರವನ್ನು ಏರ್ಪಡಿಸಿದ್ದಿದೆ. ಅಜ್ಜ ಮೊದಲೇ ಘೋಷಣೆ ಮಾದಿದ್ದರು. " ಪ್ರವೇಶ ಅರ್ಹರಿಗೆ ಮಾತ್ರ." ಎಂದು. ನಾವೆಲ್ಲಾ ಸುಮ್ಮನೆ ಆತಂಕಗೊಂಡದ್ದು ಮಾತ್ರ. ಅದು ಎಲ್ಲರಿಗೂ ಮುಕ್ತವಾಗಿಯೇ ಇತ್ತು. ಅಜ್ಜನ ನಿರ್ದೇಶನದಂತೆ ನಮ್ಮ ತರಬೇತುದಾರರು ಅಜ್ಜನ ಹಳೆಯ ಅನುಯಾಯಿ ಶಿವಶಂಕರ ಕಾಮತರು. (ನಮಗೆಲ್ಲಾ ಅವರು ಜೆಮಿನಿ ಕಾಮತ್) ಶಿಬಿರ ಪ್ರತೀ ತಿಂಗಳ ಆದಿತ್ಯವಾರ ಬೆಳಗ್ಗೆ ಎಂಟರಿಂದ ಮಧ್ಯಾಹ್ನ ಒಂದರ ತನಕ. ಒಟ್ಟು ಏಳೋ ಎಂಟೋ ಆದಿತ್ಯವಾರಗಾಲಂದು ಶಿಬಿರದ ತರಗತಿಗಳು ನಡೆದಿದ್ದವು. ಒಂದುದಿನ ಅಜ್ಜ ಎಲ್ಲರನ್ನೂ ಒಬ್ಬೊಬ್ಬರನ್ನಾಗಿ ಕೇಳಿಯೇ ಬಿಟ್ಟರು. " ನಿಮಗೆ ಈಗ ದೇಹಭಾವನೆ ಹೋಗಿದೆಯೋ?" "ಇಲ್ಲ ಅಜ್ಜ" ಎಲ್ಲರದೂ ಒಂದೇ ಉತ್ತರ. " ಹಾಗಾದರೆ ಈ ಶಿಬಿರದಿಂದ ಏನೂ ಪ್ರಯೋಜನವಿಲ್ಲ. ಇದು ಇಲ್ಲಿಗೆ ಮುಕ್ತಾಯ. ಇನ್ನು ನೀವು ನಿಮ್ಮ ನಿಮ್ಮ ಮನೆಗಳಲ್ಲಿ ಬೇಕಾದರೆ ಅಭ್ಯಾಸ ಮಾಡಬಹುದು'. ಶಿಬಿರದ ಗತಿ ಅಜ್ಜ ಹೇಳಿದಂತೆಯೇ ಆಯಿತು. ಅದೇನೇ ಇರಲಿ. ಆ ದಿನಗಳಲ್ಲಿ ನಡೆದ ಕೆಲವು ಪ್ರಶ್ನೋತ್ತರಗಳೇ ಇಲ್ಲಿ ಹೆಚ್ಚು ಪ್ರಸ್ತುತ.

ಒಬ್ಬ ಶಿಬಿರಾರ್ಥಿ: " ಅಜ್ಜಾ ನೀವು ಹೇಳಿದ ರೀತಿಯಲ್ಲಿ ಸಾಧನೆ ಮಾಡುವ ಶಕ್ತಿ ನಮ್ಮಲ್ಲಿ ಇಲ್ಲ. ನೀವೇ ಸಹಾಯ ಮಾಡಿ ನಮ್ಮನ್ನು ಮೇಲಕ್ಕೆತ್ತಬೇಕಷ್ಟೆ." ಅಜ್ಜ: " ಛೇ, ಹಾಗುಂಟೇ? ನಮಗೂ ನಿಮ್ಮನ್ನು ಮೇಲೆತ್ತಬೇಕೆಂದು ತುಂಬಾ ಆಸೆಯಿದೆ. ಆದರೆ ಏನು ಮಾಡೋಣ? ನಿಮ್ಮನ್ನು ನಾವು ಹೇಗೆ ಎತ್ತುವುದು? ನೀವು ತುಂಬಾ ಭಾರ ಇದ್ದೀರಿ. ನೀವು ತುಮ್ಬಾ ಹಗುರವಾದರೆ ಮತ್ತೆ ನೋಡಿ! ನಾವು ಸಂತೋಷದಿಂದ ನಿಮ್ಮನ್ನು ಎತ್ತಿ ಈ ಮೇಜಿನ ಮೇಲೆ ನಮ್ಮ ಹತ್ತಿರ ಕೂರಿಸುತ್ತೇವೆ"

(ಆಗ ನನ್ನ ಪಕ್ಕದಲ್ಲಿ ಕುಳಿತಿದ್ದ ಅಜ್ಜನ ಹಳೆಯ ಒಡನಾಡಿಯೊಬ್ಬರು ನನ್ನ ಕಿವಿಯಲ್ಲಿ ಪಿಸುಗುಟ್ಟಿದರು"ಅವರು ಈಗ ಹೇಳಿದ ಹಾಗೆ ಹಿಂದೆ ಮಾಡಿದ ಉದಾಹರಣೆಗಳಿವೆ")

ಬೇರೆಯೇ ಸಂದರ್ಭದ ಇನ್ನೊಂದು ಸಂವಾದ ನನ್ನ ನೆನಪಿನಲ್ಲಿದೆ:

ಪ್ರಶ್ನೆ: "ಅಜ್ಜಾ, ವಿಶ್ವವಿದ್ಯಾನಿಲಯದ ಪರೀಕ್ಷೆಗಳಲ್ಲಿ ಕೃಪಾಂಕ ಎಂಬುದೊಂದಿದೆ. ಒಬ್ಬ ಅಭ್ಯರ್ಥಿ ಒಂದು ವಿಷಯದಲ್ಲಿ ೩೨ ಅಂಕ ಗಳಿಸಿದರೆ ಅವನಿಗೆ ೩ ಕೃಪಾಂಕ ನೀಡಿ ತೇರ್ಗಡೆಗೊಳಿಸುವುದಿದೆ. ಆ ನಿಯಮವನ್ನು ಇಲ್ಲಿಗೂ ಅನ್ವಯಿಸಬಾರದೇಕೆ?"

ಅಜ್ಜ: "ಹೌದಾ? ಧಾರಾಳ. ಆದರೆ ನೀವು ೩೨ ಅಂಕ ಗಳಿಸಿಕೊಂಡು ಬನ್ನಿ. ಮತ್ತೆ ನೋಡುವ"

ನನ್ನಲ್ಲಿ ನನ್ನ ಪರಿಚಿತರು ಕೇಲುತ್ತಿದ್ದ ಒಂದು ಮುಖ್ಯ ಪ್ರಶ್ನೆಗೆ ನಾನು ಉತ್ತರಿಸುವುದು ಒಳ್ಳೆಯದು. ಅದು ಅವರ ಭೇಟಿಯಿಂದ ನನಗೆ, ನನ್ನಂಥವರಿಗೆ ಆದ ಪ್ರಯೋಜನದ ಬಗ್ಗೆ. ಉತ್ತರ ಸ್ವಲ್ಪ ಪರೋಕ್ಷವಾಗಿರಬಹುದು. ಚುಟುಕಾಗಿ ಹೇಳುವುದಿದ್ದರೆ – ಸತ್ಯದರ್ಶನ. ಅಂದರೆ ಆ ಕೊನೆಯ ಸತ್ಯದ ದರ್ಶನದ ಬಗ್ಗೆ ನಾನು ಹೇಳುವುದಿಲ್ಲ. ಅಜ್ಜ ಹೇಳುತ್ತಿದ್ದರಲ್ಲಾ "ನೀವು ನಿಮ್ಮ ಮನಸ್ಸನ್ನು ಖಾಲಿ ಮಾಡಿ' ಎಂದು. ನಾನು ಹಿಂದೆ ಕಲಿತ ಪಾಠ ಬೇರೆಯೇ ಅಲ್ಲವೇ?

"ಆನ್ ಎಮ್ಟಿ ಮೈಂಡ್ ಈಸ್ ಡೆವಿಲ್ಸ್ ವರ್ಕ್ ಶಾಪ್" ಹಾಗಾಗಿ ಮನಸ್ಸನ್ನು ಖಾಲಿ ಮಾಡಿದರೆ !? ಪೂರ್ವಾಗ್ರಹಗಳಿಂದ ಬಿಡುಗಡೆಯೆಂಬ ಸಮಸ್ಯೆಗೆ ಉತ್ತರ ನನ್ನಲ್ಲಿ ಬಾಕಿಯಿದೆ ಎಂಬುದೊಂದು ಸತ್ಯ.

ಒಮ್ಮೆ ಅಜ್ಜ ನಾನು ಕರೆಯದೆ ನನ್ನ ಮನೆಗೆ ಬಂದಿದ್ದರು. (ಆ ಸಲ ಅವರು ಈ ರೀತಿ ಸಾಮಾನ್ಯವಾಗಿ ಭೇಟಿಕೊಡದ ನಾಲ್ಕಾರು ಮನೆಗಳಿಗೆ ಹೋಗಿದ್ದರು.) ಹಲವು ಸಮಯದ ಬಳಿಕ ಅವರಲ್ಲಿ ಕಳಕಳಿಯಿಂದ ಕೇಳಿದ್ದೆ. " ನಾನು ಕರೆಯದೆ ನನ್ನ ಮನೆಗೆ ಬಂದಿದ್ದೀರಿ. ದಯಮಾಡಿ ನನ್ನ ಮನಸ್ಸಿಗೂ ಬನ್ನಿ". ಅಜ್ಜನ ಉತ್ತರ

ಜೀವನದಲ್ಲಿ ಮರೆಯಲಾಗದ್ದು. " ನಿಮ್ಮ ಮನಸ್ಸಿನಲ್ಲಿ ನಮಗೆ ಸ್ವಲ್ಪ.. ಸ್ವಲ್ಪ ..ಜಾಗ ಕೊಡಿ. ಆಗ ಬರುತ್ತೇನೆ" (ಪುರಂದರ ದಾಸರ ಹಾಡು ನೆನಪಿಗೆ ಬಂತು–ಸುಲಭದೀ ದಕ್ಕುವುದೇ ಶ್ರೀರಾಮನ ನಾಮ)
ಅಜ್ಜ ಒಮ್ಮೊಮ್ಮೆ ಮಾತು ಆರಂಭಿಸುವುದು ಅವರು ಯಾರಿಂದಲೋ ಕೇಳಿದ ಬ್ರಹ್ಮಸೂತ್ರದ ಒಂದು ಹೇಳಿಕೆಯಿಂದ"ಅಥಾತೋ ಬ್ರಹ್ಮ ಜಿಜ್ಞಾಸಾ" ನಮ್ಮ ಶಾಸ್ತ್ರಗಳು ಎಲ್ಲ ವಿದ್ಯೆಗೂ ಒಂದು ಅಧಿಕಾರ ಬೇಕು(ಅರ್ಹತೆ)ಎಂದು ವಿಧಿಸಿವೆ. ಬ್ರಹ್ಮಜ್ಞಾನಿಯೊಬ್ಬನಿಂದ ಪ್ರಯೋಜನ ಪಡೆಯಲು ಬೇಕಾದ ಪ್ರಾಥಮಿಕ ಅರ್ಹತೆಯೂ ಇಲ್ಲದ ನಾನು ಅಜ್ಜನ ಸಂಪರ್ಕದಿಂದ ಪಡೆದ ಲಾಭವೆಂದರೆ ಈ ಸತ್ಯ ದರ್ಶನ.! ಅಷ್ಟರ ಮಟ್ಟಿಗೆ ಅವರು ನನ್ನ ಗುರು! ಹೀಗೆನ್ನಲೂ ಸಂಕೋಚವಾಗುತ್ತದೆ. ಖ್ಯಾತ ಹರಿದಾಸರ ಮಾತು ನೆನಪಾಗುವುದರಿಂದ! "ನೀವೇನೋ ನನ್ನನ್ನು ಕೀರ್ತನ ಕೇಸರಿ ಎನ್ನುತ್ತೀರಿ. ನಾನು ನನ್ನನ್ನು ಹರಿದಾಸ ಎನ್ನುತ್ತಾ ಇದ್ದೇನೆ. ಆದರೆ ಹರಿ ಇದಕ್ಕೆ ಒಪ್ಪಬೇಕಲ್ಲಾ?"
ಹೌದು ಹರಿಯನ್ನು ಒಪ್ಪಿಸುವುದು ಅವರ ಸಮಸ್ಯೆ. ಮನಸ್ಸಿನಲ್ಲಿ "ಅವನಿಗೆ" ಜಾಗ ಮಾಡಿಕೊಡುವುದು ನನ್ನ ಸಮಸ್ಯೆ. ಇದಕ್ಕೇನು ಮಾಡಬೇಕು? ಅಜ್ಜ ಆಗಾಗ ಹೇಳುತ್ತಿದ್ದರು. "ಸನ್ನಿವೇಶ ಒದಗಿ ಬರಬೇಕು . ಕಾಲ ಕೂಡಿ ಬರಬೇಕು"!
ಹಾಗಾದರೆ "ಕಾಲ ಕೂಡಿ ಬರಬೇಕಾದರೆ , ಸನ್ನಿವೇಶ ಒದಗಿ ಬರಬೇಕಾದರೆ ನಾವೇನು ಮಾಡಬೇಕು?"
ಅಜ್ಜ ಹೇಳಿದ್ದು ಈಗಲೂ ನೆನಪಿನಲ್ಲಿ ಪ್ರತಿಧ್ವನಿಸುತ್ತಿದೆ: "ಅದು ಖಂಡಿತ ನಿಮ್ಮ ಕೈಯಲ್ಲಿದೆ"
ಪಾವಲ್ಕೋಡಿ ನಾರಾಯಣ ಭಟ್